**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 1543/2016**

ಚಾಸಾಃ 4
ಫ್ರಾಸಾಃ 2

**ದಿನಾಂಕಃ 09-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಗಂಗಣ್ಣ |
| ತಂದೆಯ/ಗಂಡನ ಹೆಸರು | ಃ | ಮಾರಯ್ಯ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸ ಸ್ಥಳ | ಃ | ತೆಗ್ಗಿಹಳ್ಳಿ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

2016 ರಂದು ಸಂಜೆ 7-30 ಗಂಟೆಗೆ ಟೆಂಪೋ ಟ್ರಾವೆಲ್ ನಂ. ಕೆಎ-06-3032 ವಾಹನವು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವ ಯಾರೋ ಒಬ್ಬ ವ್ಯಕ್ತಿಗೆ ಢಿಕ್ಕಿ ಪಡಿಸಿಕೊಂಡು ಹಾಗೇ ಹೊರಟು ಹೋಗಿರುತ್ತದೆಂದು ಈ ಸಂಬಂಧ ಪೊಲೀಸರು ನನಗೆ ಮಹಜರ್ ಗೆ ಸಹಕರಿಸಲು ಕೇಳಿದ್ದರಿಂದ ನಾನು ಒಪ್ಪಿ ಸ್ಥಳ ಮಹಜರ್ಗೆ ನಾನು ಸಹಕರಿಸಿರುತ್ತೇನೆ. ನನ್ನ ಸಮಕ್ಷಮ ಅಪಘಾತಕ್ಕೆ ಸಂಬಂಧಿಸಿ ಪೊಲೀಸರು ಹತ್ಯಾಳು ಬೆಟ್ಟದ ಗೇಟ್ ಬಳಿ ಮಹಜರನ್ನು ಮಧ್ಯಾಹ್ನ 2-40 ರಿಂ 3-35 ಗಂಟೆವರೆಗೆ ಮಾಡಿರುತ್ತಾರೆ. ಸದರಿ ಮಹಜರ್ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಹೆಚ್ ಎಲ್ ಬಿ ವಕೀಲರಿಂದಃ**

ಪೊಲೀಸರು ಮಹಜರ್ ಗೆ ಸಹಕರಿಸಲು ನನಗೆ ಮುಂಚಿತವಾಗಿ ನೋಟೀಸು ಕೊಟ್ಟಿರುತ್ತಾರೆ. ಸದರಿ ನೋಟೀಸನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಮಹಜರ್ಗೆ ನೋಟೀಸ್ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮಹಜರ್ ಗೆ ನನ್ನ ಜೊತೆ ಗಂಗಣ್ಣ ಎನ್ನುವವರು ಸಹಿ ಮಾಡಿರುತ್ತಾರೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

**ಸಿ.ಸಿ ನಂ. 1543/2016**

ಚಾಸಾಃ 3
ಫ್ರಾಸಾಃ 1

**ದಿನಾಂಕಃ 09-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ನರಸಿಂಹಮೂರ್ತಿ |
| ತಂದೆಯ/ಗಂಡನ ಹೆಸರು | : | ಹುಚ್ಚಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಹರೇನಹಳ್ಳಿ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

2016 ರಂದು ಸಂಜೆ 7-30 ಗಂಟೆಗೆ ಟೆಂಪೋ ಟ್ರಾವೆಲ್ ನಂ. ಕೆಎ-06-3032 ವಾಹನವು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವ ಯಾರೋ ಒಬ್ಬ ವ್ಯಕ್ತಿಗೆ ಢಿಕ್ಕಿ ಪಡಿಸಿಕೊಂಡು ಹಾಗೇ ಹೊರಟು ಹೋಗಿರುತ್ತದೆಂದು ಈ ಸಂಬಂಧ ಪೊಲೀಸರು ನನಗೆ ಮಹಜರ್ ಗೆ ಸಹಕರಿಸಲು ಕೇಳಿದ್ದರಿಂದ ನಾನು ಒಪ್ಪಿ ಸ್ಥಳ ಮಹಜರ್ಗೆ ನಾನು ಸಹಕರಿಸಿರುತ್ತೇನೆ. ನನ್ನ ಸಮಕ್ಷಮ ಅಪಘಾತಕ್ಕೆ ಸಂಬಂಧಿಸಿ ಪೊಲೀಸರು ಹತ್ಯಾಳು ಬೆಟ್ಟದ ಗೇಟ್ ಬಳಿ ಮಹಜರನ್ನು ಮಧ್ಯಾಹ್ನ 2-40 ರಿಂ 3-35 ಗಂಟೆವರೆಗೆ ಮಾಡಿರುತ್ತಾರೆ. ಸದರಿ ಮಹಜರ್ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಹೆಚ್ ಎಲ್ ಬಿ ವಕೀಲರಿಂದಃ**

ಪೊಲೀಸರು ಮಹಜರ್ ಗೆ ಸಹಕರಿಸಲು ನನಗೆ ಮುಂಚಿತವಾಗಿ ನೋಟೀಸು ಕೊಟ್ಟಿರುತ್ತಾರೆ. ಸದರಿ ನೋಟೀಸನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ.

ಸಾಕ್ಷಿ ಮುಂದುವರೆದು ಮಹಜರ್ಗೆ ನೋಟೀಸ್ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.ಸದರಿ ಮಹಜರ್ ಗೆ ನನ್ನ ಜೊತೆ ಗಂಗಣ್ಣ ಎನ್ನುವವರು ಸಹಿ ಮಾಡಿರುತ್ತಾರೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.